**ಸಾಕ್ಷಿಯನ್ನು ದಿನಾಂಕ 05-11-2025 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ- ಶ್ರೀ ATS ವಕೀಲರಿಂದಃ**

ನಾನು ಹುಟ್ಟಿದಾಗಿನಿಂದಲೂ ವಮಚಿಹಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ವಮಚಿಹಳ್ಳಿ ಗ್ರಾಮ ಕೋಳಾಲ ಗ್ರಾಮ ಪಂಚಾಯಿತಿಗೆ ಒಳಪಡುತ್ತದೆ. ಕೊಳಾಲ ಗ್ರಾಮ ಪಂಚಾಯಿತಿ ಎಷ್ಟು ವರ್ಷಗಳ ಹಿಂದೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಹೆಸರು ಚೌಡಮ್ಮ. ವಮಚಿಹಳ್ಳಿ ಗ್ರಾಮದ ಸರ್ವೆ ನಂ 1/5 ರಲ್ಲಿ ನಿವೇಶನ ಸಂಃ7 ಮಂಜೂರಾಗಿರುತ್ತದೆ ಎಂದರೆ ಸರಿ. ಅದೇ ಸಮಯದಲ್ಲಿ 1 ನೇ ಪ್ರತಿವಾದಿಗೆ ನಿವೇಶನ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಯಾವ ವರ್ಷದಲ್ಲಿ ನಿವೇಶನ ನೀಡಿರುತ್ತಾರೆಂದು ನನಗೆ ಗೊತ್ತಿಲ್ಲ. 1994-95 ನೇ ಸಾಲಿನಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ನಿವೇಶನ 1 ನೇ ಪ್ರತಿವಾದಿಗೆಮಂಜೂರಾಗಿರುವ ಬಗ್ಗೆ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕುರುಬ ಜನಾಂಗಕ್ಕೆ ಸೇರಿದವನಾಗಿರುತ್ತೇನೆ. ವಾದಿಗೆ ನಿವೇಶನ ಮಂಜೂರು ಮಾಡಿದಾಗ ಹನುಮಂತರಾಯಪ್ಪರವರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು, ಸದರಿ ಹನುಮಂತರಾಯಪ್ಪರವರು ಕುರುಬ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. 1994-95 ರಲ್ಲಿ ಸುಮಾರು 20 ಜನಕ್ಕೆ ನಿವೇಶನಗಳು ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ 20 ಜನರಲ್ಲಿ 12 ರಿಂದ 13 ಜನ ಕುರುಬ ಜನಾಂಗಕ್ಕೆ ಸೇರಿದವರು ಹಾಗೂ 5 ಜನ

ಅನುಸೂಚಿತ ಜನಾಂಗಕ್ಕೆ ಸೇರಿದವರು ಆಗಿದ್ದರು ಎಂದರೆ ಸರಿ. ಸರ್ವೆ ಸಂ **1/5** ರಲ್ಲಿ ನಿವೇಶನ ಮಂಜೂರಾಗಿರುವ **5** ಜನ ಅನುಸೂಚಿತ ಜನಾಂಗದವರನ್ನು ಸದರಿ ಬಡಾವಣೆಯಿಂದ ಹೊರ ಹಾಕುವ ಉದ್ದೇಶದಿಂದ ಹಾಗೂ ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ಮೊದಲಿನಿಂದಲೂ ವಮಚಿಹಳ್ಳಿಯಲ್ಲಿ ವಾಸ ಮಾಡುತ್ತಿದ್ದಾರೆ. ವಾದಿಗೆ ಮದುವೆ ಆಗುವ ಮೊದಲು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗನ ಹೆಸರು ನಾಗರಾಜು ಎಂದರೆ ಸರಿ. ವಾದಿಯ ಮಗಳನ್ನು ನನ್ನ ಮಗನಿಗೆ ಕೊಟ್ಟು ಮದುವೆ ಮಾಡಲು ನಿಶ್ವಯವಾಗಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣ ನಾನು ವಾದಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ನಿವೇಶನವನ್ನು ಕ್ರಯಕ್ಕೆ ಪಡೆದು ಮನೆಯನ್ನು ಕಟ್ಟಿಕೊಂಡಿರುತ್ತಾರೆ. ವಾದಿ ವಾಸ ಮಾಡುವ ಮನೆ ಹಾಗೂ ದಾವಾ ಸ್ವತ್ತು ಬೇರೆ ಬೇರೆ ಎಂದರೆ ಸರಿಯಲ್ಲ. ಈ ದಾವೆಯನ್ನು ವಾದಿಯು ನಿವೇಶನ ಸಂಃ **18** ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. **1** ನೇ ಪ್ರತಿವಾದಿರವರಿಗೆ ನಿವೇಶನ ಸಂಃ **18** ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನಿವೇಶನದಲ್ಲಿ ಮಂಜೂರಾದಾಗಿನಿಂದಲೂ ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.

ಓ.ಎಸ್. ನಂ.114 /16
ಪಿ ಡಬ್ಲ್ಯೂ-3

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

ಓ.ಎಸ್. ನಂ.114 /16
ಪಿ ಡಬ್ಲ್ಯೂ-3

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
***Koratagere.***